# ಬೆಟ್ಟದ ಮೇಲೊಂದು ಕ್ಯಾಮೆರಾ ಇಟ್ಟು..!



■ ಚಿತ್ರ– ಬರಹ:
**ಅಮರದೀಪ**



**ಕೊ**ಪ್ಪಳ ನಗರದಿಂದಾಚೆ ಗವಿಮಠದ ಗುಡ್ಡ ಅಥವಾ ಕೋಟೆಯ ತುತ್ತ ತುದಿಗೇರಿ ನೋಡಿದರೆ ಅದ್ಭುತ ನಿಸರ್ಗ ಸೆಳೆಯುತ್ತದೆ. ಒಂದೆಡೆ ಪ್ರಶಾಂತವಾಗಿ ತಡೆಹಿಡಿದು ನಿಂತಿರುವ ತುಂಗಭದ್ರೆಯ ಜಲರಾಶಿ. ಅಲ್ಲಲ್ಲಿ ಒಪ್ಪವಿಟ್ಟಂತೆ ಸಾಲು ಬೆಟ್ಟ ಗುಡ್ಡಗಳು. ಕ್ಯಾಮೆರಾ ಕಣ್ಣು ಇದಕ್ಕೆ ಹಾಕುವ ಚೌಕಟ್ಟೇ ಬೇರೆ. ನಿಸರ್ಗ ಸೃಷ್ಟಿಸುವ ವರ್ಣ ಸಂಯೋಜನೆ, ಆ ಅದ್ಭುತಕ್ಕೆ ಬೇರೆ ವಿವರಣೆ ಬೇಡ.

ಇವು ಗವಿಮಠದ ಬಂಡೆಯ ಮೇಲೆ ನಿಂತು ತೆಗೆದ ಕೋಟೆಯ ಚಿತ್ರಗಳು ಹಾಗೂ ಇಲ್ಲಿಗೆ ಸಮೀಪವಿರುವ ಹುಲಿಕೆರೆ ಪ್ರದೇಶದ ಸಂಜೆ ವೇಳೆಯ ದೃಶ್ಯಾವಳಿ. ನೇಸರ ಅಸ್ತಂಗತನಾಗುತ್ತಿದ್ದಂತೆಯೇ ಇಲ್ಲಿ ಮೂಡುವ ಬಣ್ಣದ ಚಿತ್ತಾರವಿದು. ನಡುಹಗಲಿನಲ್ಲಿಯೂ ನೋಡುವ ಕಣ್ಣಿಗೆ ಮೋಸವಿಲ್ಲ.

ದಕ್ಷಿಣ ಭಾರತವನ್ನು ಬಿಡಿಸಿಟ್ಟಂತೆ ಹುಲಿಕೆರೆ ಕಾಣುತ್ತದೆ. ಹೆಸರು ಹುಲಿಕೆರೆಯಾದರೂ, ಹಸು, ಕುರಿ ಮೇಯುವುದನ್ನು ಕಾಣಬಹುದು.

